ಹೊತ್ತು-ಹೆತ್ತವರು...

ನಗರಗಳಲ್ಲಿ ವೃದ್ಧಾಶ್ರಮಗಳು ಹೆಚ್ಚುತ್ತಿರುವ ಬಗ್ಗೆ, ಮಕ್ಕಳು ಪ್ರಾಯಕ್ಕೆ ಬಂದು ತಮ್ಮದೇ ಸಂಸಾರ ನಡೆಸುವ ಸಂದರ್ಭದಲ್ಲಿ ಹೆತ್ತವರನ್ನು ವೃದ್ಧಾಶ್ರಮಕ್ಕೆ ಸೇರಿಸುವ ಬಗ್ಗೆ ಸಾಕಷ್ಟು ಕೇಳುತ್ತೇವೆ. ಎಷ್ಟೋ ಜನರಿಗೆ ಈ ಬಗೆಯ ಘಟನೆಗಳು ಬೆಚ್ಚಿ ಬೀಳಿಸುವ ಸುದ್ದಿಯಾಗಿರುತ್ತವೆ. ಬಾಳಿನ ಸಂಜೆಯಲ್ಲಿ ಕಾಲ ಸವೆಸುವ ವೃದ್ಧರ ಪಾಲಿಗಂತೂ ಒಂದೊಂದು ದಿನವೂ, ಒಂದೊಂದು ಕ್ಷಣವೂ ನರಕಯಾತನೆ. ಆದರೆ, ತಮ್ಮೊಂದಿಗೇ ಹೆತ್ತವರನ್ನು ನೋಡಿಕೊಳ್ಳುವವರೆಲ್ಲರೂ ವೃದ್ಧ ತಾಯಿತಂದೆಯರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂದರ್ಥವಲ್ಲ. ಎಷ್ಟೋ ಕಡೆ ಭಯಾನಕ ಪರಿಸ್ಥಿತಿ ಇದೆ. ಆದರೂ, ವಯಸ್ಸಾದ ಹೆತ್ತವರು ತಮ್ಮ ಮಕ್ಕಳ ಆಶ್ರಯದಲ್ಲೇ ಇರಬಯಸುತ್ತಾರೆ. ಒಂದು ವೇಳೆ ಕಷ್ಟ , ಸಂಕಷ್ಟಗಳಿಗೆ ಒಳಗಾದರೂ, ತಮ್ಮ ಗತಿಗಾಗಿ ತಮ್ಮನ್ನೇ ಹಳಿದುಕೊಳ್ಳುತ್ತಾರೆ. ಹೆತ್ತವರನ್ನು ಮನೆಯಿಂದ ಹೊರಹಾಕುವವರಿಗೆ ಸಮಾಜದಲ್ಲಿ ಮನ್ನಣೆ ಇಲ್ಲ. ಇದು ಭಾರತದಲ್ಲಿ ಸಮಾಜವು ಕಂಡುಕೊಂಡಿರುವ ಪದ್ಧತಿ. ಮಕ್ಕಳನ್ನು ಹೊತ್ತು, ಹೆತ್ತು, ಸಾಕಿ ಸಲಹಿದ ಹೆತ್ತವರನ್ನು ಇಳಿವಯಸ್ಸಿನಲ್ಲಿ ಮಕ್ಕಳೇ ನೋಡಿಕೊಳ್ಳಬೇಕು; ಅದು ಅವರ ಕರ್ತವ್ಯ. ಸಮಾಜದ ಈ ಪದ್ಧತಿಯನ್ನು ಯಾರೂ ಪ್ರಶ್ನಿಸುವುದಿಲ್ಲ. ನೈತಿಕತೆ, ಶ್ರದ್ಧೆ, ಧರ್ಮ, ನಂಬಿಕೆ ಹಾಗೂ ಪರಂಪರೆ ಈ ಬಗೆಯ ಒಂದು ವ್ಯವಸ್ಥೆಯನ್ನು ನಿರ್ಮಿಸಿದೆ. ಎಷ್ಟೇ ಬಿಕ್ಕಟ್ಟುಗಳಿದ್ದರೂ, ಗೊಂದಲಗಳಿದ್ದರೂ, ಕರ್ತವ್ಯಪ್ರಜ್ಞೆಯ ಮೂಲಕ ಸಾಮಾಜಿಕ ವ್ಯವಸ್ಥೆಯೊಂದು ನಿರ್ಮಾಣವಾಗಿದೆ. ಈ ಬಗೆಯ ಪದ್ಧತಿಯಿಂದ ಭಾರತೀಯ ಕುಟುಂಬ ಪದ್ಧತಿ ಹತ್ತಾರು ಸಮಸ್ಯೆಗಳನ್ನು ಪರಿಹರಿಸಿಕೊಂಡಿದೆ. ಪಾಶ್ಚಾತ್ಯ ಜೀವನ ಶೈಲಿಗೆ ಮಾರುಹೋಗಿ, ಅಲ್ಲಿನಂತೆ ಬದುಕಬಯಸುವವರು ನಮ್ಮಲ್ಲಿನ ಜೀವನ ಕ್ರಮದ ಶ್ರೇಷ್ಠತೆ ಏನೆಂಬುದನ್ನು ಮೊದಲು ಅರಿತುಕೊಳ್ಳಬೇಕು. ಇದರಿಂದ ಮುಂದಾಗುವ ಹಲವು ಅನಾಹುತಗಳನ್ನು ತಪ್ಪಿಸಿಕೊಳ್ಳಬಹುದು. ಕಾಲ ಮೀರಿದ ಬಳಿಕ 'ಗೋಳೋ' ಎಂದು ಅಳುವ ಪರಿಸ್ಥಿತಿ ಬಾರದಂತೆ ತಡೆಗಟ್ಟಬಹುದು.

ವೃದ್ಧಾಪ್ಯದ ಸಮಸ್ಯೆಗಳು

'ವಯಸ್ಸಿಗೆ ಬಂದಾಗ ಕಣ್ಣು ಕಾಣುವುದಿಲ್ಲ' ಎಂಬ ಒಂದು ಮಾತಿದೆ. ಪ್ರಾಯ ಬಂದಾಗ, ಯೌವನದ ಹುಮ್ಮಸ್ಸಿನಲ್ಲಿ , ಬಿಸಿರಕ್ತದ ಮದದಲ್ಲಿ ಜೀವನದ ಅನೇಕ ಸಮಸ್ಯೆಗಳನ್ನು ಗಮನಿಸದೆ, ತಮ್ಮ ಸುಖಭೋಗ-ಲಾಲಸೆಗಳಲ್ಲೇ ಮೈಮರೆತವರಿಗೆ ಹಾಗೆ ಹೇಳುತ್ತಾರೆ. ಎಲ್ಲರೂ ಹಾಗಾಗಬೇಕಾಗಿಲ್ಲ, ನಿಜ. ವಿವೇಕ, ಪ್ರಜ್ಞೆ, ತಾಳ್ಮೆ ಎಂಬುದು ಎಲ್ಲರೂ, ಎಲ್ಲ ವಯಸ್ಸಿನವರೂ ಹೊಂದಿರಬೇಕಾದ ಗುಣ. ಆದರೆ, ಯುವಜನರು ದೈಹಿಕವಾಗಿ, ಮಾನಸಿಕವಾಗಿ ಹೆಚ್ಚು ದೃಢವಾಗಿರುತ್ತಾರೆ. ಈ ಕಾರಣದಿಂದ ಅಲ್ಲಿ ಉತ್ಸಾಹ, ಕ್ರಿಯಾಶೀಲತೆ, ಚಟುವಟಿಕೆ ಅಧಿಕ. ಅದು ದಾರಿ ತಪ್ಪದ ಹಾಗೆ, ಸದುಪಯೋಗವಾಗುವ ಹಾಗೆ, ಅಂತೆಯೇ ಯೋಗ್ಯ ಹಾದಿಯಲ್ಲಿ ಮುನ್ನಡೆಯುವ ಹಾಗೆ ಮಾಡಲು ಸರಿಯಾದ ವಿವೇಕ ಅಗತ್ಯ. ತಾವೇ ತಾವಾಗಿ ಇವುಗಳನ್ನು ಅರಿಯುವ ಪಕ್ವತೆ, ಪ್ರೌಢತೆ ಹೆಚ್ಚಾಗಿ ಯುವಕ-ಯುವತಿಯರಲ್ಲಿ ಇರುವುದಿಲ್ಲ. ಈ ಕಾರಣದಿಂದ ಹೆತ್ತವರ ಮಾರ್ಗದರ್ಶನ ಯಾವಾಗಲೂ ಅತಿ ಮುಖ್ಯವೆನಿಸುತ್ತದೆ. ಹೆತ್ತವರನ್ನು, ಹಿರಿಯರನ್ನು ಕಡೆಗಣಿಸುವ ಯುವಕರು ಇದನ್ನು ಗಮನಿಸಬೇಕು - ವೃದ್ಧರಿಗೆ ಅಪಾರ ಜೀವನಾನುಭವವಿರುತ್ತದೆ. ಅದನ್ನು ಅರಿತುಕೊಂಡು ತಮ್ಮ ಜೀವನದಲ್ಲಿ ಅನುಸರಿಸುವ ತಾಳ್ಮೆ ಯುವಕರಲ್ಲಿರಬೇಕು. ಇದರಿಂದ ಅವರು ಅನೇಕ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದು.

ವೃದ್ಧಾಪ್ಯದಲ್ಲಿ ದೇಹ ಹಲವು ಬಗೆಯ ಅನಾರೋಗ್ಯ, ಬಳಲಿಕೆ, ಶಿಥಿಲವಾದ ಶಕ್ತಿ ಮುಂತಾದ ತೊಂದರೆಗಳಿಗೆ ಒಳಗಾಗುತ್ತದೆ. ಸಹಜವಾಗಿ ಅವರು ಮಾನಸಿಕ ಏರುಪೇರು, ಚಿಂತೆ, ಖಿನ್ನತೆಗಳಿಗೆ ಒಳಗಾಗುತ್ತಾರೆ. ಇದರೊಂದಿಗೆ, 'ತಮ್ಮ ಜೀವನ ಮುಗಿದುಹೋಯಿತು; ತನಗೆ ಇನ್ನೇನೂ ಮಾಡಲಾಗದು; ಮರಣದ ಸಮಯ ಸಮೀಪಿಸುತ್ತಿದೆ' ಮುಂತಾದ ಆಲೋಚನೆಗಳು ಕಾಡುತ್ತವೆ. ಇಂತಹ ಸಂದರ್ಭದಲ್ಲಿ ತಮ್ಮ ಮಕ್ಕಳ ಆಸರೆ, ಪ್ರೀತಿ ಹಾಗೂ ರಕ್ಷಣೆ ಅವರಿಗೆ ಅದೆಂತಹ ಧೈರ್ಯ ನೀಡಬಹುದು ನೋಡಿ! ಮಕ್ಕಳಿಂದ ಅಪಾರ ನಿರೀಕ್ಷೆಯನ್ನು ಅವರು ಹೊಂದಿರುವುದಂತೂ ಸಹಜವೆ. ಅಂತಹ ನಿರೀಕ್ಷೆಗಳು ಪೂರೈಕೆಯಾಗದೆ ಹೋದರೆ, ಅದೇ ಬಾಳಿನ ಕೊರಗಾಗಿ ಪರಿಣಮಿಸುತ್ತದೆ. ಇತ್ತೀಚೆಗಂತೂ ವೃತ್ತಿಯ ಕಾರಣಕ್ಕಾಗಿ ಹೆತ್ತವರ ಜೊತೆಗೆ ಮಗ, ಸೊಸೆಯಂದಿರು ಇರುವುದು ಸಾಧ್ಯವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಅನೇಕ ಕಡೆ ಮಕ್ಕಳೆಲ್ಲ ಅಮೆರಿಕ, ಯೂರೋಪ್

ನಲ್ಲಿ ಕೆಲಸ ಮಾಡುತ್ತಾರೆ; ಇಲ್ಲಿ ವೃದ್ಧ ಹೆತ್ತವರು ಒಬ್ಬಂಟಿ ಬದುಕನ್ನು ಸಾಗಿಸುತ್ತಾರೆ. ಅವರ ಮಕ್ಕಳಂತೂ ಇಲ್ಲಿನವರು ಅಲ್ಲವೇ ಅಲ್ಲ. ಮುದಿ ಅಜ್ಜ-ಅಜ್ಜಿಯರನ್ನು ಒಂದು ವಿಚಿತ್ರ ವೆಂಬಂತೆ ನೋಡಿ ಹೋಗುತ್ತಾರೆ. ತಮ್ಮ ಸಂತತಿ ಹೀಗಾಗುತ್ತಿರುವುದನ್ನು ನೋಡಿ ಈ ವೃದ್ಧರು ನಿಟ್ಟುಸಿರು ಬಿಡುತ್ತಾರೆ.

ಎಲ್ಲೋ ಕೆಲವರಿದ್ದಾರೆ, ಹೆತ್ತವರಿಗೋಸ್ಕರ ಎಲ್ಲವನ್ನೂ ತ್ಯಾಗ ಮಾಡಿ, ಅವರನ್ನು ನೋಡಿಕೊಳ್ಳುವುದೇ ತಮ್ಮ ಆದ್ಯ ಕರ್ತವ್ಯ ವೆಂದು ಭಾವಿಸುವ ಮಕ್ಕಳು. ಬೇರೆ ಏನೇ ತೊಂದರೆಗಳಿದ್ದರೂ, ತಮ್ಮ ಮಕ್ಕಳ ಮುಖ ನೋಡುತ್ತ ಅವರ ಹೆತ್ತವರು ಆನಂದ ದಿಂದಿರುತ್ತಾರೆ. ಆಧುನಿಕ ಜೀವನದಲ್ಲಿ ಇಂಥ ಉದಾಹರಣೆ ಗಳು ವಿರಳ. ಆದರೆ ಹೀಗೆ ಬದುಕುವ ಯುವಕರೇ ಧನ್ಯರು.

ಕುಟುಂಬದ ಆದರ್ಶ

ಅನಾದಿಕಾಲದಿಂದಲೂ ಕುಟುಂಬದ ಕಲ್ಪನೆ ಮಾನವ ಜನಾಂಗ ದಲ್ಲಿದ್ದುದು ಕಂಡುಬರುತ್ತದೆ. ಕಾಡಿನಲ್ಲಿ, ಗುಹೆಗಳಲ್ಲಿ, ಅಲೆ ಮಾರಿಗಳಾಗಿ ಜೀವನ ನಡೆಸುತ್ತಿದ್ದ ಆದಿಮಾನವನು ಕೂಡ ಗುಂಪುಗುಂಪಾಗಿಯೇ ವಾಸಿಸುತ್ತಿದ್ದ. ಅಲ್ಲಿ ಕೂಡ ತಾಯಿ-ಮಕ್ಕಳು, ಗಂಡು-ಹೆಣ್ಣು, ವೃದ್ಧರು ಈ ಸಂಬಂಧಗಳೆಲ್ಲ ನಿರ್ದಿಷ್ಟವಾಗಿದ್ದವು. ಪ್ರಾಣಿಗಳಲ್ಲಿ ಬಲಿಷ್ಠವಾದ ಪ್ರಾಣಿಯೇ ನಾಯಕನಾಗಿ ಗುಂಪನ್ನು ಮುನ್ನಡೆಸುತ್ತಿದ್ದರೆ, ಮಾನವರಲ್ಲಿ ಹಿರಿಯ ವ್ಯಕ್ತಿ, ಅಥವಾ ಹಿರಿಯ ಹೆಂಗಸು(ತಾಯಿ) ತನ್ನ ಗುಂಪ ನ್ನು ಮುನ್ನಡೆಸುತ್ತಿದ್ದುದನ್ನು ಆದಿಮ ಸಮಾಜಗಳಲ್ಲಿ ನೋಡು ತ್ತೇವೆ. ಇಂಥ ಸಮಾಜ ಮುಂದೆ ಸಂತತಿ ಹೆಚ್ಚಿದಾಗ ಅನೇಕ ಭೂಪ್ರದೇಶಗಳಿಗೆ ಹರಡಿತು; ಪರಿಣಾಮವಾಗಿ ಹೊಸ ಹೊಸ ಅನುಭವ, ಹೊಸ ಆವಿಷ್ಕಾರ, ತಿಳಿವಳಿಕೆ ಇವುಗಳಿಂದ ಮಾನವನ ವಿಕಸನ ಕ್ರಮೇಣ ಉಂಟಾಯಿತು. ಇದಕ್ಕೆ ಅನುಗುಣವಾಗಿ ಸಾಮಾಜಿಕ ಪದ್ಧತಿ, ಸಂಬಂಧಗಳು ಬದಲಾಗತೊಡಗಿದವು. ಒಟ್ಟಾಗಿ, ಒಂದು ಗುಂಪಾಗಿ ಬದುಕುತ್ತಿದ್ದ ಜನರು ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಂಡು, ಒಂದೊಂದು ಕುಟುಂಬವಾಗಿ ಬದುಕ ತೊಡಗಿದರು. ಮೊದಲು ಅವಿಭಕ್ತ ಕುಟುಂಬಗಳಾ ಗಿದ್ದು, ಮೂರು ನಾಲ್ಕು ತಲೆಮಾರಿನವರೆಲ್ಲ ಒಟ್ಟಿಗೆ ಬದುಕ ತೊಡಗಿದರು. ಕ್ರಮೇಣ ಅವು ಒಡೆದು, ಒಂದೊಂದು ಸಣ್ಣ ಕುಟುಂಬ ಬದುಕುವ ಪದ್ಧತಿ ಬೆಳೆದುಬಂತು. ಭೌಗೋಳಿಕ ಸನ್ನಿವೇಶ, ಸಾಮಾಜಿಕ ಅಗತ್ಯ, ನಾಗರಿಕತೆ, ವೈಯಕ್ತಿಕ ಹಿತಾಸಕ್ತಿ ಗಳಿಂದ ಈ ಮಾರ್ಪಾಡುಗಳು ಉಂಟಾದವು.

ಆದರೆ ಸಮಾಜದಲ್ಲಿ ಕಂಡುಬರುವ ಪದ್ಧತಿ, ಪರಂಪರೆ, ನೀತಿ, ಆದರ್ಶಗಳು ಎಲ್ಲಿಂದ ಬಂದವು? ಯಾವಾಗ ಹುಟ್ಟಿ ಕೊಂಡವು? — ಈ ಪ್ರಶ್ನೆಗಳಿಗೆ ಖಚಿತವಾದ ಉತ್ತರ ನೀಡು ವುದು ಕಷ್ಟ. ಆದರೆ ಜೀವನದ ಅನೇಕ ಬಗೆಯ ಸ್ಥಿತ್ಯಂತರಗಳಲ್ಲಿ, ಬಿಕ್ಕಟ್ಟಿನ ಅಥವಾ ಗೊಂದಲದ ಸನ್ನಿವೇಶಗಳಲ್ಲಿ ಕೆಲವೊಂದು ಅನಿವಾರ್ಯತೆಯ ಪರಿಸ್ಥಿತಿಗಳಲ್ಲಿ ಈ ಪದ್ಧತಿ-ಪರಂಪರೆಗಳು ರೂಪುಗೊಂಡವು ಎಂದು ನಾವು ನಿಸ್ಸಂದೇಹವಾಗಿ ಊಹಿಸ ಬಹುದು. ಅವು ಎಲ್ಲಿಂದಲೋ 'ಧುತ್ತೆಂದು' ಕಾಣಿಸಿಕೊಂಡವು ಗಳಲ್ಲ; ಯಾವುದೋ ಸ್ವಹಿತಾಸಕ್ತಿಗಾಗಿ ಯಾರೋ ಜಾರಿಗೆ ತಂದವೂ ಅಲ್ಲ. ಸಮಾಜವು ಎಷ್ಟೋ ಶತಶತಮಾನಗಳಲ್ಲಿ, ವಿವಿಧ ಅನುಭವಗಳ ಪರಿಣಾಮವಾಗಿ ರೂಪಿಸಿಕೊಂಡ ಪದ್ಧತಿ ಗಳಿವು. ಪರಂಪರೆ, ಪದ್ಧತಿ, ಸಂಪ್ರದಾಯ ಎಂದರೆ ಮೂಗು ಮುರಿಯುವ ಜನರು ಅವುಗಳ ಹಿನ್ನೆಲೆಯನ್ನು ವಿಶೇಷವಾಗಿ ಗಮನಿಸಬೇಕು. ಎಲ್ಲ ಪದ್ಧತಿ-ಪರಂಪರೆಗಳ ಹಿಂದೆ ಒಂದು ವಿಶೇಷ ಅರ್ಥವಿರುತ್ತದೆ; ಯಾವುದೋ ಸಮಸ್ಯೆ-ಗೊಂದಲ ಗಳನ್ನು ತಡೆಗಟ್ಟುವ ಉದ್ದೇಶವಿರುತ್ತದೆ. ಇದನ್ನರಿಯದೆ, ಪದ್ಧತಿ -ಪರಂಪರೆಗಳನ್ನು ಧಿಕ್ಕರಿಸುವ ಪ್ರವೃತ್ತಿ, ಮತ್ತೊಮ್ಮೆ ಅನಾಹುತ ಗಳನ್ನೆಲ್ಲ ಎದುರಿಸಬೇಕಾಗುತ್ತದೆ. ಇದು ಅನಿವಾರ್ಯ.

ಕುಟುಂಬದ ಅತ್ಯುನ್ನತ ಆದರ್ಶವೇನು? — ತ್ಯಾಗವೇ ಆದರ್ಶ. ಇದನ್ನು ಬೇರೆ ಬೇರೆ ಮಾತುಗಳಿಂದ, ವಿಭಿನ್ನ ಭಾವ ಗಳಿಂದ ಕಂಡುಕೊಳ್ಳುತ್ತೇವೆ ಅಷ್ಟೆ. ಇಡೀ ಕುಟುಂಬವನ್ನು ನಡೆಸಿ ಕೊಂಡು ಹೋಗುವ ಗಂಡಸು ಅದನ್ನು 'ಜವಾಬ್ದಾರಿ' ಎನ್ನು ತ್ತಾನೆ. ಮಕ್ಕಳ ವೃದ್ಧ ಮಾತಾಪಿತರ, ಊಟೋಪಚಾರ ಇತ್ಯಾದಿ ಗಳನ್ನು ನೋಡಿಕೊಳ್ಳುವ ಹೆಂಗಸು ಅದನ್ನು 'ಕರ್ತವ್ಯ' ಎನ್ನು ತ್ತಾಳೆ. ಕಿರಿಯರು, ಮಕ್ಕಳು ತಪ್ಪು ಮಾಡಿದಾಗ ಅಥವಾ ಬಿಕ್ಕಟ್ಟು ತಲೆದೋರಿದಾಗ ವಿವೇಕದ ಮಾತುಗಳನ್ನು ಹೇಳುವ ವೃದ್ಧರು ಅದನ್ನು 'ದಾರಿ ತೋರಿಸುವುದು' ಎನ್ನುತ್ತಾರೆ. ಇನ್ನು ಕುಟುಂ ಬದ ಉಳಿದ ಸದಸ್ಯರೂ ತಮ್ಮ ತಮ್ಮ ಪಾಲಿನ ಕಾರ್ಯ ನಿರ್ವ ಹಿಸಬೇಕು. ಇಲ್ಲಿ ಎಲ್ಲೆಡೆ ಕಂಡುಬರುವ ಸಾಮಾನ್ಯ ಭಾವ ನೆಯೇ 'ತ್ಯಾಗ'. ತಮ್ಮ ಕುಟುಂಬದ ಸದಸ್ಯರಿಗೆ, ತಮ್ಮ ಪ್ರೀತಿ ಪಾತ್ರರಿಗೆ ಹಿತವಾದುದನ್ನು ಮಾಡುವ ಕಾರ್ಯವನ್ನು ತ್ಯಾಗ ವೆನ್ನಬೇಕೆ? ಅದು ಸ್ವಾರ್ಥವಾಗದೆ? ಎಂದು ಪ್ರಶ್ನಿಸುವರಿದ್ದಾರೆ. ಇದಕ್ಕೆ ಒಂದೇ ಉತ್ತರ: 'ಎಲ್ಲ ಸೇವೆಯೂ ಮನೆಯಿಂದಲೇ ಪ್ರಾರಂಭವಾಗುತ್ತದೆ' ಎಂಬ ಮಾತಿನಂತೆ, ಎಲ್ಲ ಆದರ್ಶ, ಒಳಿತು, ಕರ್ತವ್ಯ, ತ್ಯಾಗ ಇವುಗಳನ್ನು ತಮ್ಮ ಕುಟುಂಬದ ಹಂತದಿಂದಲೇ ಆರಂಭಿಸಬೇಕು. ಮೊದಲು ಕುಟುಂಬ, ಬಳಿಕ ಸಮಾಜ, ರಾಜ್ಯ -ದೇಶ ಹೀಗೆ ವಿಶಾಲವಾಗುತ್ತ ಹೋಗಲಿ. ಅಷ್ಟನ್ನು ಪೂರೈಸಿದ ಬಳಿಕವೇ 'ಇಡೀ ಮಾನವ ಕುಲ', 'ಒಟ್ಟು ವಿಶ್ವವ್ಯಾಪೀ ಭಾವ' ಗಳ ಬಗ್ಗೆ ಮಾತನಾಡಲಿ. ಇಲ್ಲದಿದ್ದರೆ, 'ಊರಿಗೆ ಉಪಕಾರಿ, ಮನೆಗೆ ಮಾರಿ' ಎಂಬ ಗಾದೆಯಂತೆ, ದೊಡ್ಡ ದೊಡ್ಡ ಆದರ್ಶದ ಮಾತುಗಳು ಪೊಳ್ಳುತನವಾಗುವುವು.

ಸವಾಲುಗಳು

ಆಧುನಿಕ ಬದುಕಿನಲ್ಲಿ ಹೆತ್ತು ಹೊತ್ತು ಸಲಹುವ ಕಾರ್ಯ ಹತ್ತಾರು ಸವಾಲುಗಳನ್ನು ತಂದೊಡ್ಡಿದೆ. ಗಂಡ-ಹೆಂಡತಿ- ಮಗು - ಇವಿಷ್ಟೇ ಕುಟುಂಬ; ಪತಿ-ಪತ್ನಿಯರಿಬ್ಬರೂ ಉದ್ಯೋಗ

ಮಾಡುತ್ತಾರೆ; ಮಗುವನ್ನು ಸಾಕಿ ಬೆಳೆಸುವ ಹೊಣೆ ಯಾರದು? ಉದ್ಯೋಗ ಹಾಗೂ ಕುಟುಂಬ ಎರಡನ್ನೂ ಸರಿದೂಗಿಸುವುದು ಕೆಲವರಿಗೆ ಸುಲಭವಾದೀತು; ಆದರೆ ಅನೇಕರಿಗೆ ಕಷ್ಟಕರ. ಕೆಲಸ ಮುಗಿಸಿ ಮನೆಗೆ ಮರಳಿದ ಹೆತ್ತವರು, ಆಯಾಸಗೊಂಡಾಗ ಮಕ್ಕಳಿಗೋಸ್ಕರ ಸಮಯ ಕೊಡುವುದೇ ಬಹಳ ಕಷ್ಟ. ಇನ್ನು ಅವರ ಓದು, ಆರೋಗ್ಯ, ಬೆಳವಣಿಗೆ ಇತ್ಯಾದಿಗಳಿಗೆ ಗಮನ ಕೊಡುವುದು ಹೇಗೆ? ಮಕ್ಕಳು 'ಹೇಗೋ' ಬೆಳೆಯುತ್ತವೆ ಎಂಬ ಭಯ ಕಾಡುತ್ತಿದ್ದರೂ, ಏನೂ ಮಾಡಲಾಗದ ಅಸಹಾಯಕತೆ. ಅಜ್ಜ-ಅಜ್ಜಿಯಂದಿರನ್ನು ಜೊತೆಗೇ ನೋಡಿಕೊಳ್ಳುವ ಕುಟುಂಬವಾಗಿದ್ದರೆ ಈ ಸಮಸ್ಯೆ ಕಡಿಮೆಯಾದೀತು. ಸಂದರ್ಭ, ಸನ್ನಿವೇಶಗಳಿಗೆ ತಕ್ಕಂತೆ ಏನೇನೋ ವ್ಯವಸ್ಥೆ ಮಾಡಿಕೊಳ್ಳುತ್ತ, ಎಲ್ಲವನ್ನೂ ಸರಿದೂಗಿಸುವ ಪ್ರಯತ್ನವನ್ನು ಎಲ್ಲರೂ ಮಾಡಲೇಬೇಕಾಗುತ್ತದೆ. ಆದರೆ ಆಗುವ ಹಾನಿಯಂತೂ ಆಗಿಯೇ ತೀರುತ್ತದೆ. ಇದು ಹೆತ್ತವರಿಗೆ ಅರ್ಥವಾಗುವುದು ಮುಂದೊಂದು ದಿನ — ತಮ್ಮ ಮಕ್ಕಳು ಸರಿಯಾದ ರೀತಿಯಲ್ಲಿ ಬೆಳೆಯುತ್ತಿಲ್ಲ, ಅವರಿಗೆ ಅಗತ್ಯವಾದ ಮಾರ್ಗದರ್ಶನ ಸಿಗುತ್ತಿಲ್ಲ ಎಂದು ತಿಳಿದಾಗ.

ನಗರಗಳಲ್ಲಿ ಬಾಹ್ಯ ಪರಿಸರದ ಪ್ರಭಾವ ಹೆಚ್ಚಿನ ಪ್ರಮಾಣದಲ್ಲಿ ಉಂಟಾಗುತ್ತದೆ. ಕುಟುಂಬಗಳಿಗೆಲ್ಲ ಅವುಗಳದೇ ಆದ ಪರಂಪರೆ, ಪದ್ಧತಿ ಇದ್ದರೂ, ನಗರ ಜೀವನ ಅವನ್ನೆಲ್ಲ ಅಳಿಸಿ ಹಾಕುತ್ತದೆ. ಇದು ಆಧುನಿಕ ಜೀವನ ತಂದೊಡ್ಡುವ ಇನ್ನೊಂದು ಸವಾಲು. ಪ್ರಾಚೀನವಾದುದನ್ನೆಲ್ಲ ಲೇವಡಿ ಮಾಡುವ, ಸಂಪ್ರದಾಯ, ಪರಂಪರೆಗಳೆಲ್ಲ ನಿರರ್ಥಕವೆನ್ನುವ 'ಆಧುನಿಕ'ರ ಪ್ರವೃತ್ತಿಗೆ ಯುವ ಮನಸ್ಸುಗಳು ಸುಲಭವಾಗಿ ತುತ್ತಾಗುತ್ತವೆ. ಪ್ರಬಲವಾದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬೆಳೆಯದ ಮಕ್ಕಳಿಗೆ ಇಂಥ ಪ್ರವೃತ್ತಿಗಳನ್ನು ಎದುರಿಸಿ ನಿಲ್ಲುವುದು ಅಸಾಧ್ಯ. ಹಲವಾರು ಆಘಾತಗಳ ನಡುವೆ, ಅನೇಕ ಪರಿವರ್ತನೆಗಳ ನಡುವೆ ಎಲ್ಲೋ ಕೆಲವು ಯುವಕರಷ್ಟೇ ಭಾರತೀಯ ಜೀವನ ಪದ್ಧತಿಯ ಕಡೆಗೆ ಮರಳುವ ಮನಸ್ಸು ಮಾಡುತ್ತಾರೆ. ಅವರಿಗೂ ಕೂಡ ಕಡಿದು ಹೋದ ಪರಂಪರೆ, ಸಂಪ್ರದಾಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಕಠಿಣ. ಇನ್ನು ಅನೇಕ ಮಂದಿ, ಈ ಬಗೆಯ ಬದುಕನ್ನು ಬಯಸುವುದೇ ಇಲ್ಲ; 'ಆಧುನಿಕ'ರಾಗಬಯಸುತ್ತಾರೆ.

ಈಗ ಪಾಲಕ-ಪೋಷಕರಾಗಿರುವವರು ಮಹತ್ವದ ಪಾತ್ರ ವಹಿಸಬೇಕಾದದ್ದೇ ಇಲ್ಲಿ. ಅವರಿಗೆ ಆಧುನಿಕ ಜೀವನದ ಪರಿಚಯವಿದೆ, ಅದಕ್ಕೆ ಮಾರುಹೋದವರಿದ್ದಾರೆ. ಆದರೆ ಹಿಂದಿನ ಸಂಪ್ರದಾಯ, ಸಂಸ್ಕೃತಿ, ಪದ್ಧತಿಗಳನ್ನು ಅವರು ಕಂಡಿದ್ದಾರೆ. ಅದನ್ನು ಮುಂದಿನ ಪೀಳಿಗೆ ಮುಂದುವರಿಸಿಕೊಂಡು ಹೋಗಬೇಕಾದರೆ, ತಾವು ಮಾಡಬೇಕಾದ ಕರ್ತವ್ಯ ಏತಿಮುಖ್ಯವೆಂಬುದನ್ನು ಅವರು ಅರಿತುಕೊಳ್ಳಬೇಕು. ಬಾಹ್ಯ ಆಕರ್ಷಣೆ, ಪ್ರಭಾವಗಳಿಗೆ ಒಳಗಾಗುವ ಮುನ್ನ ಮಕ್ಕಳು ನಮ್ಮ ಕುಟುಂಬ, ಮನೆತನ, ಸಂಪ್ರದಾಯಗಳನ್ನು ಅರಿತು ಅಭ್ಯಾಸ ಮಾಡಲಿ. ಅವುಗಳ ಬಗ್ಗೆ ಅಪಾರ ಶ್ರದ್ಧೆ, ಅಭಿಮಾನಗಳನ್ನು ಹೊಂದಲಿ. ಈ ಬಗೆಯ ತರಬೇತಿ, ಶಿಕ್ಷಣ ಮನೆಯಿಂದಲೇ ಆರಂಭವಾಗಬೇಕು. ಇವನ್ನು ವಿದ್ಯಾಸಂಸ್ಥೆಗಳಿಂದ ಹೆಚ್ಚು ನಿರೀಕ್ಷಿಸಲಾಗದು. ಆದ್ದರಿಂದ ಹೆತ್ತವರ ಜವಾಬ್ದಾರಿ ಹೆಚ್ಚಿನದು. ಮಕ್ಕಳಿಗೆ ಕಲಿಸುವ ಮುನ್ನ ತಾವು ಅಂತಹ ಜೀವನವನ್ನು ನಡೆಸಬೇಕು. ಆ ಬಗೆಯ ಜೀವನ ನಡೆಸಲು ಹೆತ್ತವರು ಪ್ರಜ್ಞಾಪೂರ್ವಕವಾಗಿ ಅವನ್ನು ಅರಿತಿರಬೇಕು.

ಧರ್ಮ-ಅಧ್ಯಾತ್ಮಗಳ ಆಸರೆ

ಜೀವನ-ಕುಟುಂಬ-ಸಂಸ್ಕೃತಿ ಇವನ್ನೆಲ್ಲ ಬೆಸೆಯುವ ಕೊಂಡಿಯೇ ಧರ್ಮ. ಎಲ್ಲರಿಗೂ ನೀತಿ, ನಿಯಮ, ಸಂಪ್ರದಾಯ, ಪದ್ಧತಿಗಳನ್ನು ಕಲಿಸುತ್ತ, 'ಹೀಗೆ ಬದುಕಬೇಕು' ಎಂದು ಧರ್ಮವು ನಿರ್ದೇಶಿಸುತ್ತದೆ. ಇದಕ್ಕೆ ಅನುಸಾರವಾಗಿ ನಡೆಯುವುದೇ ಶ್ರೇಯಸ್ಸಿನ ಹಾದಿ ಎಂದು ನಮ್ಮ ಶಾಸ್ತ್ರಗ್ರಂಥಗಳು ಹೇಳುತ್ತವೆ. ಹೆಚ್ಚು ವೈಜ್ಞಾನಿಕತೆ, ಆಧುನಿಕತೆ, ಬೌದ್ಧಿಕತೆಗಳನ್ನು ಅರಿತುಕೊಂಡವರು ನಮ್ಮ ಧರ್ಮ, ಸಂಸ್ಕೃತಿ, ಸಂಪ್ರದಾಯಗಳನ್ನು ಧಿಕ್ಕರಿಸಬೇಕು ಎಂಬ ಭಾವನೆ ಹಲವರಲ್ಲಿ ಇದ್ದ ಹಾಗಿದೆ. ಆದರೆ ಕೆಲವೇ ಕೆಲವು ಭಾರತೀಯರನ್ನು ನೋಡಿ – ಅವರು ಪ್ರಖ್ಯಾತ ವಿಜ್ಞಾನಿಗಳು, ಚಿಂತಕರು, ಅಥವಾ ಆಧುನಿಕರು; ಆದರೆ ಜೀವನದುದ್ದಕ್ಕೂ ನಿಷ್ಠಾವಂತ ಧಾರ್ಮಿಕ ಬದುಕನ್ನು ಬದುಕಿದರು. ಜಗದೀಶಚಂದ್ರ ಬೋಸ್, ಸಿ.ವಿ.ರಾಮನ್, ಡಾ. ಅಬ್ದುಲ್ ಕಲಾಂ ಮುಂತಾದವರು ತಮ್ಮ ಕಾಲಕ್ಕೆ ಅತ್ಯಾಧುನಿಕರು; ಆದರೆ ಅವರು ಯಾರೂ ಭಾರತೀಯ ಜೀವನದ ಬೇರನ್ನು ಬಿಟ್ಟು ಹೋಗಲಿಲ್ಲ.

ಆಧುನಿಕತೆಯೆಂಬುದು ವಿಜ್ಞಾನ-ತಂತ್ರಜ್ಞಾನ, ಆಧುನಿಕ ಯಂತ್ರಸಾಮಗ್ರಿಗಳ ಬಳಕೆಯಲ್ಲಿಲ್ಲ. ಅದು ಒಂದು ರೀತಿಯ ಮನಸ್ಥಿತಿ. ಸದಾ ಹೊಸತನ್ನೇ ಕಾಣುವ, ಬದುಕುವ ಮನಸ್ಥಿತಿ. ಈ ದೃಷ್ಟಿಯಿಂದ ನೋಡಿದರೆ, ನಮ್ಮ ಪ್ರಾಚೀನ ಉಪನಿಷತ್ತಿನ ಋಷಿಗಳಷ್ಟು, ಗೀತೆಯ ಶ್ರೀಕೃಷ್ಣನಷ್ಟು, ಬುದ್ಧ-ಶಂಕರರಷ್ಟು ಆಧುನಿಕರು ಬೇರೆ ಯಾರಿದ್ದಾರೆ? ದಿನದಿನಕ್ಕೂ ಬಾಹ್ಯ ಬದುಕು ಬದಲಾಗುತ್ತಿದೆ; ಆದರೆ ನಮ್ಮ ಮೌಲ್ಯ, ಜೀವನಧರ್ಮ, ಭಾರತೀಯವಾದ ಜೀವನ ಪದ್ಧತಿ ಬದಲಾಗದಿರಲಿ. ಸಾಮರಸ್ಯವನ್ನೇ ಎಲ್ಲೆಡೆ ಕಾಣುವ ಭವ್ಯ ಮನೋಧರ್ಮ ನಮ್ಮದಾಗಬೇಕು. ❁

ನವೆಂಬರ್ ತಿಂಗಳ ಕಾರ್ಯಕ್ರಮಗಳು

೪	ಶುಕ್ರವಾರ	ಏಕಾದಶಿ
೫	ಶನಿವಾರ	ಸ್ವಾಮಿ ಸುಬೋಧಾನಂದ ಜಯಂತಿ
೭	ಸೋಮವಾರ	ಸ್ವಾಮಿ ವಿಜ್ಞಾನಾನಂದ ಜಯಂತಿ
೨೦	ಭಾನುವಾರ	ಏಕಾದಶಿ